Sri A. BHEEMARPA NAIK.—This Report is placed at the end of the session and there is no time to discuss it. When we raise questions later on, they begin to say it will be placed. I want this Report to be taken up for consideration or discussion.

Sri H. K. VEERANNA GOWDH.—I would suggest that we shall meet on Monday and discuss this Report.

Sri A. BHEEMAPPA NAIK.—Anyway, I want time to be given for discussion of this Report.

Mr. SPEAKER.—It will be taken note of. I just want to bring to the notice of the Government that there are some real grievances of the Hon'ble Members; they will be taken note of by the Government and they will be redressed.

So far as this Report is concerned, it should be placed much earlier so that the members can have an opportunity to discuss it.

SECOND FIVE-YEAR PLAN

(Discussion Continued)

Mr. SPEAKER.—Now the discussion on the Second Five-Year Plan will be resumed.

ಶ್ರೀ ಎನ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ: ಈಗಾಗಲೇ ಮೊದಲನೆಯ ಪಾಂಚವಾರ್ಷಿಕ ಯೋಜನೆ ಜಯಪ್ರದವಾಗಿ ನಡೆದು ದೇಶಾದ್ಯಂತವೂ ಜನರಿಗೆ ಅನ್ನ ವಸ್ತ್ರಗಳ ಕೊರತೆ ನೀಗಿ ಈಗ ನಾವಿನ್ನು ಕೈಗಾರಿಕೆಯಲ್ಲಿ ಪ್ರಗತಿಯನ್ನು ಹೊಂದಬೇಕಾಗಿದೆ. ಅದಕ್ಕಾಗಿ ಈಗ ಈ ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಸುಮಾರು 86 ಕೋಟಿ ರೂಪಾಯಿಗಳನ್ನು ಒದಗಿಸಿರುತ್ತಾರೆ. ಈ ಹಣವಲ್ಲದೆ ಅಲಾಯಿದ ನಮ್ಮ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಭಿವೃದ್ಧಿಗಾಗಿ 11.55 ಕೋಟಿ ರೂಪಾಯಿಗಳನ್ನು ಪ್ರತ್ಯೇಕವಾಗಿ ಒದಗಿಸಿರುತ್ತಾರೆ. ಈ ಯೋಜನೆಯನ್ನು ಪರಿಪೂರ್ಣಗೊಳಿಸುವುದರೊಳಗಾಗಿ ನಮ್ಮ ದೇಶದಲ್ಲಿ ಎಷ್ಟು ಜನರಿಗೆ ಉದ್ಯೋಗಗಳು ದೊರೆಯುತ್ತವೆಂಬುದನ್ನು ಪರಿಶೀಲಿಸಿದ್ದಾರೆ. ಈ ಯೋಜನೆಯಲ್ಲಿ 36 ಸಾವಿರ ಜನ ಅನ್‌ಸ್ಕಿಲ್ಡ್ ಪೀಪರ್‌ಗಳಿಗೂ, 24 ಸಾವಿರ ಸ್ಕಿಲ್ಡ್ ಪರ್ಸನ್ನ್‌ಗಳಿಗೂ ಮತ್ತು 1,700 ಜನ ಪ್ರೊಫೆಷನಲ್ ಮತ್ತು ಟೆಕ್ನಿಕಲ್ ಪರ್ಸನ್ನ್‌ಗಳಿಗೂ ಉದ್ಯೋಗ ನಮ್ಮ ಮೈಸೂರು ಸಂಸ್ಥಾನದಲ್ಲಿ ದೊರೆಯುತ್ತದೆಂದು ತಿಳಿದುಬಂದಿದೆ. ಈ ಯೋಜನೆಯು ಪೂರ್ತಿಸುವ ವೇಳೆಗೆ ಮತ್ತೆ ಒಂದು ಲಕ್ಷ ಜನರಿಗೆ ಉದ್ಯೋಗ ದೊರೆಯುವುದಾಗಿ ತಿಳಿಸಿದ್ದಾರೆ. ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಮತ್ತು ಈ ಬಗ್ಗೆ ಒಂದು ವರದಿಯನ್ನು ತಯಾರಿಸಲು ಒಂದು ಸಮಿತಿಯನ್ನು ನೇಮಕಮಾಡಲಾಗಿತ್ತು. ಆ ವರದಿಯಲ್ಲಿ ತಜ್ಞರಾಗಿದ್ದಂಥ ಜನರು ಯಾವರೀತಿ ಸೂಚಿಸಿದ್ದಾರೋ ಆ ರೀತಿಯಲ್ಲೇ ಈಗ ಈ ಯೋಜನೆಯನ್ನು ತಯಾರಿಸಿ ನಮ್ಮಮುಂದೆ ಇಟ್ಟಿದ್ದಾರೆ. ಈ ದ್ವಿತೀಯ ಯೋಜನೆಯಲ್ಲಿ ಕೈಗಾರಿಕೆಗಳಿಗೂ, ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೂ ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೂ . ಶೇಕಡ 50 ರಷ್ಟು ಪೊಬಲಗನ್ನು ತೆಗೆದಿಟ್ಟಿದ್ದಾರೆ. ಈ ಯೋಜನೆಯಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಹಣವನ್ನೊದಗಿಸಲು ಪ್ರಯತ್ನ ಪಟ್ಟಿದ್ದಾರೆ. ಈಗ ಈ ವ್ಯವಸಾಯದ ಕನಬನ್ನು ಉತ್ತಮಗೊಳಿಸಲು ಈ ಕನಬನ್ನಲ್ಲ ನಾನಾ ರೀತಿಯ ಸಂಶೋಧನೆಗಳನ್ನು ಕೈಗೊಳ್ಳತಕ್ಕ ಬಗ್ಗೆ ಈಯೋಜನೆಯಲ್ಲ 800 ಜನ ವ್ಯವಸಾಯ ಪದವೀಧರರನ್ನು ಪಡೆಯಲು ನಮ್ಮದೇಶದಲ್ಲರತಕ್ಕ ವ್ಯವಸಾಯದ ಕಾರೇಜನ್ನು ಇನ್ನೂ ಉತ್ತಮಪಡಿಸಬೇಕೆಂದು ಹೇಳಿದ್ದಾರೆ. ಈ ಪ್ಲಾನ್ ಪೀರಿಯಡ್ಡಿಗೆ 800 ಜನ ಪದವೀಧರರು ಬೇಕಾಗಿದ್ದಾರೆಂದೂ ಅದಕ್ಕಾಗಿ ಈ ಐದು ವರ್ಷಗಳ ಅವಧಿಯಲ್ಲ ಪ್ರತಿವರ್ಷವೂ 80 ಜನರ ಪ್ರಕಾರ 400 ಜನರನ್ನು ಟ್ರೈನಪ್ ಮಾಡುವುದಾಗಿ ಹೇಳಿದ್ದಾರೆ. ಹೀಗೆ ಈ 400 ಜನ ಪದವೀಧರರನ್ನು ತಯಾರಿಸುವುದಕ್ಕೂ ಐದು ವರ್ಷಬೇಕು. ಈ ದ್ವಿತೀಯ ಪಾಂಚವಾರ್ಷಿಕ ಯೋಜನೆ ಮುಗಿಯುವುದಕ್ಕೂ ಐದು ವರ್ಷ ಬೇಕು. ಹೀಗಿರುವುದರಿಂದ ಈ ವ್ಯವಸಾಯೋದ್ಯಮದ ಬಗ್ಗೆ ನಡೆಸಬೇಕಾಗಿರತಕ್ಕ ಸಂಶೋಧನೆಗಳನ್ನು ಕೈಗೊಳ್ಳಲು ನಮಗೆ ಅಗತ್ಯವಿರುವಂಥ ಈ 400 ಜನ ವ್ಯವಸಾಯ ಪದವೀಧರರು ಒದಗುವುದಕ್ಕೆ ಐದು ವರ್ಷಗಳ ಕಾಲ ಹಿಡಿಯುವುದರಿಂದ ಈ ಯೋಜನೆಯಲ್ಲಿ ಅಳವಡಿಸಿಕೊಂಡಿರುವಂಥ ಕಾರ್ಯಕ್ರಮಗಳೆಲ್ಲಾ ಎಷ್ಟರಮಟ್ಟಿಗೆ ಜಯಪ್ರದವಾಗುತ್ತವೆ ಎಂಬುದು ನನಗೆ ಅನುಮಾನಾಸ್ಪದವಾಗಿದೆ. ಇದಕ್ಕಾಗಿ ನಾನು ನಲಹೆ ಮಾಡುವುದೇನೆಂದರೆ ಈಗ ನಾವು ನಮ್ಮ ಯೋಜನೆಯಲ್ಲಿ ಅಳವಡಿಸಿಕೊಂಡಿರತಕ್ಕ ಬಾಬುಗಳನ್ನೆಲ್ಲಾ ಜಯಪ್ರದವಾಗಿ ಮುಂದುವರಿಸಿಕೊಂಡು ಹೋಗಬೇಕಾಗಿರುವುದರಿಂದ ತಾವು ಪರದೇಶದಿಂದ ಈ ಬಾಬುನಲ್ಲ ಪ್ರವೀಣರಾಗಿರತಕ್ಕಂಥವರನ್ನು ಕರೆಸಿಕೊಳ್ಳಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಆದರೆ ತಾವೇನೋ ಈಗ ಈ ಅಗ್ರಿಕಲ್‌ಚರರ್ ಕಾರೇಜನ್ನು ಉತ್ತಮಪಡಿಸಬೇಕೆಂಬುದಾಗಿ ಹೇಳಿದ್ದೀರಿ. ಆದರೆ ತಾವು ಆ ಕಾರೇಜಿಗೆ ಉತ್ತಮದ ದರ್ಜೆಯಲ್ಲ ಪಾಸಾದ ವಿದ್ಯಾರ್ಥಿಗಳನ್ನು ಸೇರಿಸದೆ ಥರ್ಡ್ ರೇಟಿನಲ್ಲ ಪಾಸಾದಂಥ ವಿದ್ಯಾರ್ಥಿಗಳನ್ನೇ ಸೇರಿಸಿಕೊಳ್ಳುತ್ತಿದ್ದರೆ ಈ ವ್ಯವಸಾಯ ಪದವೀಧರರ ದರ್ಜೆ ಅಷ್ಟೇನೂ ಉತ್ತಮಗೊಳ್ಳಲಾರದು. ಈ ರಿಸರ್ಚ್ ಕಾರ್ಯ ಕೂಡ ಅಷ್ಟು ಯಶಸ್ವಿಯಾಗಿ ನಡೆಯಲಾರದು. ಈ ವಿಷಯ ಈ ಅಗ್ರಿಕಲ್‌ಚರರ್ ಕಾರೇಜಿಗೆ ವಿದ್ಯಾರ್ಥಿಗಳನ್ನು ಸೇರಿಸತಕ್ಕ ಕಾರ್ಯವನ್ನು ಎಲ್ಲಾ ಕಾರೇಜುಗಳಲ್ಲೂ ಸೀಟ್ ಭರ್ತಿಯಾದನಂತರ ಕೊನೆಯಲ್ಲಿ ಇಟ್ಟುಕೊಂಡಿದ್ದಾರೆ. ಈ ರೀತಿ ನಡೆಯುತ್ತಿರುವುದರಿಂದ ಒಳ್ಳೆಯ ಮೇಧಾವಂತರಾದ ಮತ್ತು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದಂಥ ವಿದ್ಯಾರ್ಥಿಗಳೆಲ್ಲಾ ಮೊದಲು ಮೊದಲೇ ಮೆಡಿಕಲ್ ಕಾರೇಜ್ ಮತ್ತು ಇಂಜಿನಿಯರಿಂಗ್ ಕಾರೇಜ್ ಇತ್ಯಾದಿ ಕಾರೇಜುಗಳಿಗೆ ಸೇರಿಬಿಟ್ಟು ಕೊನೆಯಲ್ಲಿ ಯಾವ ವಿದ್ಯಾರ್ಥಿಗಳಿಗೆ ಎಲ್ಲಿಯೂ ಸ್ಥಳ ದೊರೆಯದೆ ಹೋಗುತ್ತದೋ ಆಗ ಅಂಥ ವಿದ್ಯಾರ್ಥಿಗಳೇ ಬಹಳಮಟ್ಟಿಗೆ ಈ ವ್ಯವಸಾಯದ

ಕಾಲೇಜಿಗೆ ಬಂದು ಸೇರಿಕೊಳ್ಳುತ್ತಿದ್ದಾರೆ. ಯಾವ ವಿದ್ಯಾರ್ಥಿಗೇ ಆಗಲಿ, ಯಾವ ಕಾಲೇಜಿನಲ್ಲಿ ಸ್ಥಳ ಸಿಕ್ಕದಿದ್ದರೂ ಈ ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ಆತನಿಗೆ ಸ್ಥಳ ಸಿದ್ಧವಾಗಿ ಇದ್ದೇ ಇರುತ್ತದೆ. ಆದಕಾರಣ ತಾವು ಈ ಅಗ್ರಿಕಲ್‌ಚರಲ್ ಕಾಲೇಜಿಗೆ ಉತ್ತಮ ದರ್ಜೆ ವಿದ್ಯಾರ್ಥಿಗಳನ್ನು ಸೇರಿಸಿಕೊಂಡರೆ ಆಗ ಈ ಕಾಲೇಜಿನ ದರ್ಜೆ ಉತ್ತಮಗೊಳ್ಳುತ್ತದೆ. , ಹಾಗೆ ಮಾಡದೆ ಥರ್ಡ್ ಗ್ರೇಡಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಂಡರೆ ಅನೇಕರು ಈ ವ್ಯಾಸಂಗದಲ್ಲಿ ತೇರ್ಗಡೆ ಸಹ ಆಗದೆ ಹೋಗಬಹುದು. ಆದಕಾರಣ ಈ ನಮ್ಮ ಯೋಜನೆಯಲ್ಲಿ ಕೈಗೊಳ್ಳಬೇಕಾದ ಸಂಶೋಧನೆಗಳು ಜಯಪ್ರದವಾಗಿ ನಡೆಯಬೇಕಾದರೆ ಈ ಕಾಲೇಜಿಗೆ ಉತ್ತಮ ದರ್ಜೆ ವಿದ್ಯಾರ್ಥಿಗಳು ಸೇರುವಂತೆ ಪ್ರೋತ್ಸಾಹಿಸಬೇಕೆಂದು ಹೇಳುತ್ತೇನೆ. ಹೀಗೆ ಮಾಡದಿದ್ದರೆ ಇವು ಜಯಪ್ರದವಾಗಿ ನಡೆಯಲಾರವು ಎಂದು ನಾನು ಭಾವಿಸಿದ್ದೇನೆ.

ಇನ್ನು ರಾಷ್ಟ್ರೀಯ ಆದಾಯದ ಹೆಚ್ಚುವರಿಯು ಈ ಮೊದಲನೆ ಪಾಂಚವಾರ್ಷಿಕ ಯೋಜನೆಯಲ್ಲಿ *per capita* income 250 ರೂಪಾಯಿಗಳವರೆಗೂ ಹೆಚ್ಚಿದೆ. ಇನ್ನು ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ *per capita* income 330 ರೂಪಾಯಿಗಳಿಗೆ ಹೆಚ್ಚುವುದಾಗಿ ತಿಳಿಸಿದ್ದಾರೆ. ಎಂದರೆ ಈ ರಾಷ್ಟ್ರೀಯ ವರಮಾನ ಪ್ರಥಮ ಯೋಜನೆಯಲ್ಲಿ ಶೇಕಡ 18ಕ್ಕೆ ಏರಿದ್ದುದು ದ್ವಿತೀಯ ಯೋಜನೆಯ ಆಖೈರಿಗೆ ಶೇಕಡ 25ಕ್ಕೆ ಏರುವ ನಿರೀಕ್ಷಣೆಯಿದೆ ಎಂದು ಆರ್ಥಿಕ ನಿಪುಣರು ಹೇಳಿದ್ದಾರೆ. ಈ ಬಾಬಿನಲ್ಲಿ ಈಗ ಬರಲಿರುವ ಐದು ವರ್ಷಗಳಲ್ಲಿ ನಮ್ಮ ಭಾರತ ಸರ್ಕಾರ 4,800 ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ನಿರೀಕ್ಷಣೆಯಿದೆ. ಆದರೆ ಈಗ ನಮ್ಮ ಸಂಸ್ಥಾನದಲ್ಲಿ ಕಬ್ಬಿಣದ ಸಾಮಾನುಗಳಿಗೆ ಕಂಟ್ರೋಲನ್ನು ಮತ್ತೆ ಹಾಕಿದ್ದಾರೆ. ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಕೆಲಸ ಕಾರ್ಯಗಳೆಲ್ಲಾ ಜಯಪ್ರದವಾಗಬೇಕಾಗಿದ್ದರೆ ನಮಗೆ ಈ ಸಲಕರಣೆಗಳ ಮತ್ತು ಉಪಕರಣಗಳ ಅಗತ್ಯ ಬಹಳ ಹೆಚ್ಚಾಗಿದೆ. ನಾವು ಪರದೇಶದಿಂದ ಯಂತ್ರ ಸಾಮಗ್ರಿ ಮತ್ತು ಇ-ರ ಉಪಕರಣಗಳ ಬಗ್ಗೆ ವಿಶೇಷ ಹಣವನ್ನು ತೆರಬೇಕಾಗಿ ಬರುತ್ತದೆ. ಆದರೆ ಈಗಾಗಲೇ ಹಣದ ಉಬ್ಬರ ಜಾಸ್ತಿಯಾಗಿರುವುದರಿಂದ ಈ ಸಾಮಾನುಗಳ ಬೆಲೆ ದಿನ ದಿನಕ್ಕೂ ಏರುತ್ತಿದೆ. ನಾವು ಕಂಟ್ರೋಲ್ ಇಲ್ಲದಂತೆಯೇ ಈ ಸಾಮಾನುಗಳ ವ್ಯವಹಾರ ನಡೆಸಬಹುದು. ಆದರೆ ಈ ದಿವಸ ಉದ್ಭವಿಸಿರುವ ಈ ಕಬ್ಬಿಣದ ಅಭಾವ ಕೃತಕವಾದದ್ದು. ಈ ಕಂಟ್ರೋಲುಗಳಿದ್ದರೆ ಕೇವಲ ಶ್ರೀಮಂತರಿಗೆ ಮಾತ್ರ ಅನುಕೂಲ ದೊರೆತು ಇತರರಿಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಏನೇ ಆಗಲಿ ಈ ಪಾಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಂಟ್ರೋಲುಗಳನ್ನು ಹಾಕುವುದರಿಂದ ಜನರಿಗೆ ಅಷ್ಟೇನೂ ಅನುಕೂಲವಾಗಲಿ ಅಥವಾ ಈ ಕೆಲಸಗಳನ್ನು ಹುರುಪಿನಿಂದ ಮುಂದುವರಿಸಲು ಅವರಿಗೊಂದು ಉತ್ಸಾಹವಾಗಲಿ ಇರುವುದಿಲ್ಲವೆಂಬುದು ನನ್ನ ಅಭಿಪ್ರಾಯ. ಈ ದಿವಸ ಅಗ್ರಿಕಲ್‌ಚರಲ್ ಬಾಬಿನಲ್ಲಿ ಡೆವಲಪ್‌ಮೆಂಟ್ ನತೆನಲು ಹಬ್ಬಾಳದಲ್ಲಿ ಮಾತ್ರ ಒಂದು ವ್ಯವಸಾಯದ ಕಾಲೇಜಿದೆ. ಈ ಕಾಲೇಜಿನಿಂದ ಮಲೆನಾಡಿಗೇನೂ ಪ್ರಯೋಜನವಿಲ್ಲ. ಮಲೆನಾಡಿನಿಂದ ಬರತಕ್ಕಂಥ ವಿದ್ಯಾರ್ಥಿಗಳಿಗೆ ಈ ಕಾಲೇಜು ಅಷ್ಟು ಪ್ರಯೋಜನಕರವಾಗಿಲ್ಲ. ಏಕೆಂದರೆ ಈ ಕಾಲೇಜಿಗೆ ವ್ಯಾಸಂಗಕ್ಕೆ ಬರತಕ್ಕ ವಿದ್ಯಾರ್ಥಿಗಳಿಲ್ಲಾ ಇಲ್ಲಿಯ ಎಂದರೆ ಈ ಮೈದಾನ ಸೀಮೆಯಲ್ಲಿರ ತಕ್ಕ ಹವಾಗುಣ ಮತ್ತು ಭೂಗುಣಕ್ಕನುಸಾರವಾಗಿ ಇಲ್ಲಿಯ ಸಂಶೋಧನೆಗಳು ನಡೆಯುತ್ತಿರುವುದರಿಂದ ನಮ್ಮ ಮಲೆನಾಡು ವಿದ್ಯಾರ್ಥಿಗಳಿಗೆ ಮಲೆನಾಡಿನ ಭೂಗುಣ ಮತ್ತು ಹವಾಗುಣಗಳಿಗೆ ಯೋಗ್ಯ ವಾದಂಥ ಬೆಳೆಗಳೇನು ಎಂಬುದನ್ನು ಕಂಡುಹಿಡಿಯುವುದಕ್ಕೆ ಈ ಹೆಬ್ಬಾಳ ಕಾಲೇಜಿನಲ್ಲಿ ಸಾಧ್ಯವಿಲ್ಲ. ಈ ಕಾರಣದಿಂದ ನಾನು ಮಲೆನಾಡಿನಲ್ಲೊಂದು ವ್ಯವಸಾಯದ ಕಾಲೇಜನ್ನು ಸ್ಥಾಪಿಸಲು ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ನಮ್ಮ ದೇಶದಲ್ಲಿ ಶಾಂತಿಯನ್ನು ಬೆಳೆಯತಕ್ಕಂಥ ಪ್ರದೇಶ ಜಾಸ್ತಿಯಾಗಿದೆ. ಇನ್ನೂ ಹೆಚ್ಚು ಬೆಳೆ ಶಾಂತಿ ಬೇಕಾಗುತ್ತದೆ. ಈ ದಿವಸ ನಾವು ಈ ಸಾಮಾನನ್ನು ಸಹ ಪರದೇಶವಿಂದಲೇ ತರಿಸಿಕೊಳ್ಳಬೇಕಾಗಿದೆ. ಹೀಗೆ ಪರದೇಶದಿಂದ ಬರತಕ್ಕಂಥ ಶಾಂತಿಯಾದರೋ ಅದು ಒಣ ಶಾಂತಿ. ಆದುದರಿಂದ ಈ ಯೋಜನೆಯಲ್ಲಾದರೂ ನಮ್ಮ ಸರ್ಕಾರದವರು ಈ ಬೆಳೆಯನ್ನು ಬೆಳೆಸಲು ಏನೇನು ಅಗತ್ಯ ಎಂಬುದನ್ನು ಕಂಡುಹಿಡಿಯಲು ಒಂದು ಟ್ರೈನಿಂಗ್ ಸೆಂಟರನ್ನು ಏರ್ಪಾಡು ಮಾಡಿ ಈ ಸಾಮಾನನ್ನು ನಮ್ಮ ದೇಶದಲ್ಲೇ ಉತ್ಪತ್ತಿ ಮಾಡಿಕೊಳ್ಳುವಂತೆ ಅವಕಾಶ ಕಲ್ಪಿಸಬೇಕೆಂದು ಹೇಳುತ್ತೇನೆ.

ಇನ್ನು ಈ ದ್ವಿತೀಯ ಯೋಜನೆಯಲ್ಲಿ ಡೈರಿಫಾರಂಗಳನ್ನು ತೆರೆಯುತಕ್ಕ ಬಗ್ಗೆ 30·40 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಸೇರಿಸಿರುತ್ತಾರೆ. ಬೆಂಗಳೂರುಸೀಟಿಯಲ್ಲಿ ಒಂದು ಮಿಲ್ಕ್ ಸಪ್ಲೈ ಯೂನಿಯನ್ನನ್ನೂ ಮತ್ತು ಭದ್ರಾವತಿಯಲ್ಲಿ 10·40 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಮಿಲ್ಕ್ ಸಪ್ಲೈ ಯೂನಿಯನ್ನನ್ನು ತೆರೆಯುವುದಾಗಿ ತಿಳಿಸಿದ್ದಾರೆ. ಮೈಸೂರುದೇಶದಲ್ಲಿ ಈ ದಿವಸ ಪ್ರತಿ ಮನುಷ್ಯನಿಗೂ ಎರಡು ಔನ್ಸ್ ಹಾಲು ಕೂಡ ಸರಿಯಾಗಿ ಸಿಕ್ಕುತ್ತಿಲ್ಲ. ನಮ್ಮ ಇಡೀ ಇಂಡಿಯಾ ದೇಶದಲ್ಲಿ ಉತ್ಪತ್ತಿಯಾಗತಕ್ಕ ಹಾಲಿನ ಲೆಕ್ಕ ತೆಗೆದುಕೊಂಡರೆ ತಲೆ ಒಂದಕ್ಕೆ ಸರಾಸರಿ ಐದು ಔನ್ಸ್ ದೊರೆಯಬಹುದೆಂದು ತಿಳಿದುಬಂದಿದೆ. ಹೀಗಾಗಿ ಜನರಿಗೆ ಸರಿಯಾದ ಪೌಷ್ಟಿಕಾಹಾರಗಳು ದೊರೆಯುತ್ತಿಲ್ಲ. ಅದರ ಜೊತೆಗೆ ಈ ಅತ್ಯಗತ್ಯವಾದ ಹಾಲೂ ಸಹ ಸಿಕ್ಕುತ್ತಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತಲೆಯೊಂದಕ್ಕೆ ಸರಾಸರಿ 40-50-60 ಔನ್ಸ್‌ಗಳ ತನಕ ಹಾಲು ದೊರೆಯುತ್ತಿದೆಯೆಂದು ತಿಳಿದುಬಂದಿದೆ. ಆದರೆ ಈಗ ಬೆಂಗಳೂರಿನಲ್ಲಿ ತೆರೆಯಬೇಕೆಂದು ಉದ್ದೇಶಿಸಿರತಕ್ಕ ಡೈರಿಯಿಂದ ಸಂಸ್ಥಾನದಲ್ಲಿ ಇನ್ನು 10 ವರ್ಷಗಳು ಕಳೆದರೂ ಈ ಹಾಲಿನ ಸ್ಥಿತಿ ಉತ್ತಮಗೊಳ್ಳುವುದಿಲ್ಲವೆಂದು ಹೇಳುತ್ತೇನೆ. ಆದರೆ ಇತ್ತೀಚೆಗೆ ಕಳೆದ 8-10 ವರ್ಷಗಳಿಂದ ಬೆಂಗಳೂರಿನಲ್ಲಿ ಹಾಲಿನ ಪರಿಸ್ಥಿತಿ ಬಹಳಮಟ್ಟಿಗೆ ಉತ್ತಮಗೊಂಡಿದೆ. ಈಗೀಗ ಇಲ್ಲಿ ಒಳ್ಳೆಯ ಹಾಲು ದೊರೆಯುತ್ತಿದೆ. ಆದರೆ ಈಗ ಜಿಲ್ಲಾ ಪ್ರದೇಶಗಳಲ್ಲಿ ಹಾಲಿನ ಸರಬರಾಯಿ ಬಹಳ ಕಷ್ಟ ದೆಶೆಯಲ್ಲಿದೆ. ಆದುದರಿಂದ ತಾವು ಇಲ್ಲಿ ಒದಗಿಸಿರತಕ್ಕ ಈ 30 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಪ್ರತಿಯೊಂದು ಜಿಲ್ಲೆಗೂ ಸಮನಾಗಿ ಹಂಚಬೇಕೆಂದು ಹೇಳಿ ಈ ಯೋಜನೆಯನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಫ್ರೂಟ್ಸ್‌ಕ್ಯಾನಿಂಗ್ ಯೋಜನೆಯ ಬಗ್ಗೆ 25 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲು ಸರ್ಕಾರ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ).

ದವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ—

"Eat what you can and can what you cannot eat."

ಈ ದಿವಸ ನಾವು ನಮ್ಮ ಮೈಸೂರು ಸಂಸ್ಥಾನದಲ್ಲಿ ಉತ್ಪತ್ತಿಯಾಗುತ್ತಿರುವ ಹಣ್ಣುಗಳನ್ನು ಲೆಕ್ಕಹಾಕಿದರೆ ಸಾಮಾನ್ಯವಾಗಿ ಒಬ್ಬ ಸಾಧಾರಣ ವ್ಯಕ್ತಿ ಒಂದು ಮಾವಿನ ಹಣ್ಣನ್ನೂ ಕೂಡ ತಿನ್ನುವ ಸ್ಥಿತಿಯಿರುವುದಿಲ್ಲ. ಇಂಥ ಒಂದು ಕ್ಯಾನಿಂಗ್ ಪ್ಲಾಂಟನ್ನು ಹಾಕಬೇಕಾಗಿದ್ದರೆ ನಮ್ಮ ಸಂಸ್ಥಾನದಲ್ಲಿ ಹಣ್ಣುಗಳ ಉತ್ಪತ್ತಿ ವಿಶೇಷವಾಗಿರಬೇಕು. ಹಾಗೆ ವಿಶೇಷ ಹಣ್ಣುಗಳ ಉತ್ಪತ್ತಿಯಿಲ್ಲದಿರುವಾಗ ಸರ್ಕಾರದವರು ಈ ಫ್ರೂಟ್ ಕ್ಯಾನಿಂಗ್ ಉದ್ಯಮವನ್ನು ಮುಂದುವರಿಸಿದರೆ, ಆಗ ನಮ್ಮ ಸಂಸ್ಥಾನದಲ್ಲಿ ಯಾವ ಹಣ್ಣೇ ಆಗಲಿ 8 ಆಣೆಗಿಂತಲೂ ಹೆಚ್ಚಿನ ಬೆಲೆಯಾಗುತ್ತದೆ. ತಾವು ಈ ದಿವಸ ಈ ಕೈಗಾರಿಕೆಯನ್ನು ಪ್ರಾರಂಭಿಸಬೇಕೆಂದು ಉದ್ದೇಶಿಸಿ ಗಿಡಗಳನ್ನು ಬೆಳೆಸುವುದಕ್ಕೆ ಪ್ರಾರಂಭ ಮಾಡಿದರೆ ಈ ಗಿಡಗಳನ್ನು ಬೆಳೆಯುವುದಕ್ಕೆ ತಮಗೆ 10 ವರ್ಷಗಳಮೇರೆ ಬೇಕಾಗುತ್ತದೆ. ಈ ದಿವಸ ನಮ್ಮಲ್ಲಿ ಹಣ್ಣುಗಳು ಹಾಗೆಯೇ ಬಿದ್ದು ಕೊಳೆತು ಹೋಗುತ್ತಿದ್ದ ಪಕ್ಷದಲ್ಲಿ ತಾವು ಈ ಕೈಗಾರಿಕೆಯನ್ನು ಪ್ರಾರಂಭಿಸಬಹುದಾಗಿತ್ತು. ಆದರೆ ಈ ದಿವಸ ಕಿತ್ತಲೆ ಹಣ್ಣುಗಳ ಬೆಲೆಯಾದರೋ ಒಂದಾಣೆ-ಒಂದೂವರಾಣೆಗೊಂದು ಹಣ್ಣಾಗಿದೆ. ಈ ಹಣ್ಣುಗಳು ವರ್ಷಾದ್ಯಂತವೂ ಸಿಕ್ಕುವುದಿಲ್ಲ. ತಾವು ಈ ಫ್ರೂಟ್ ಕ್ಯಾನಿಂಗ್ ಕೈಗಾರಿಕೆಯನ್ನು ಪ್ರಾರಂಭಿಸಿದರೆ ಆಗ ಜೊಮೆಜೋ ಹಣ್ಣುಗಳೂ ಕೂಡ ಒಂದು ರೂಪಾಯಿ ಕ್ರೊಟ್ಟರೂ ಒಂದು ವೀಸೆ ಹಣ್ಣು ಬರುವುದಿಲ್ಲ. ಮಾವಿನಹಣ್ಣಿನ ಬೆಲೆ ಸಹ ನಾಲ್ಕು ಆಣೆಗಳ ಮೇರೆ ಹೋಗಬಹುದು. ಆಗ ಇದೊಂದು ಲಗ್ಸರಿ ಆರ್ಟಿಕಲ್ ಆಗುತ್ತದೆಯೇ ಹೊರತು ಇದರಿಂದ ಬಡವರಿಗೇನೂ ಅನುಕೂಲವಾಗುವುದಿಲ್ಲ.

10 A.M.

Mr. SPEAKER.—His point is there will be more cultivation.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹೆಚ್ಚಿನ ವಿಸ್ತೀರ್ಣದಲ್ಲಿ ತೋಟಗಳನ್ನು ಮಾಡಿ ಹೆಚ್ಚಿನ ಫಲ ಬಂದನಂತರ ಉಪಯೋಗಿಸಿಕೊಳ್ಳಬಹುದು. ಹಾಗಲ್ಲದೇ ಈಗಲೇ ಫ್ರೂಟ್ಸ್ ಕ್ಯಾನ್ ಮಾಡಿದರೆ ಇದರ ಬೆಲೆ ಒಂದಕ್ಕೆ ಎರಡರಷ್ಟು ಆಗುತ್ತದೆ. ಇದು ಒಂದು ಭೋಗ ವಸ್ತುವಾಗಿ ಯಾರು ಶ್ರೀಮಂತರೋ ಅವರು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಮಧ್ಯವರ್ತಿಜನರಿಗೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೇನೆ. ಎಕ್ಸ್‌ಪರಿಮೆಂಟಲ್ ಆಗಿ ಎರಡು ಲಕ್ಷ ರೂಪಾಯಿ ಖರ್ಚುಮಾಡಿ ಅದನ್ನು ಕಮರ್ಷಿಯಲೈಸ್ ಮಾಡಬಹುದು ಎಂದು ಹೇಳುತ್ತೇನೆ. ಅನ್ಸಾಂನಲ್ಲಿ ಕಿತ್ತಳೆಹಣ್ಣಿನ ಬೆಳೆ ಇದೆ. ಅದೇ ರೀತಿ ಕೊಡಗಿನಲ್ಲೂ ಕೂಡ ವಿಶೇಷವಾಗಿ ಕಿತ್ತಳೆಹಣ್ಣನ್ನು ಬೆಳೆಯುತ್ತಾರೆ. ಇಂಥ ಹಣ್ಣುಗಳನ್ನು ಕ್ಯಾನ್ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ಹಣ್ಣು ಯಥೇಚ್ಛವಾಗಿ ಬೆಳೆದು ಉಪಯೋಗಮಾಡುವುದಕ್ಕೆ ಸಾಧ್ಯವಿಲ್ಲದೇ ಕೆಟ್ಟು ಹೋಗುತ್ತದೆಯೋ ಅಂಥಾ ಸಂದರ್ಭದಲ್ಲಿ ಫ್ರೂಟ್‌ಕ್ಯಾನ್ ಮಾಡಬಹುದೇ ಹೊರತು, fresh fruits ಪ್ರತಿಯೊಬ್ಬರಿಗೂ ಸಿಕ್ಕದೇ ಇರುವಾಗ ಈ ರೀತಿ ಕ್ಯಾನ್ ಮಾಡಿದರೆ ಖಂಡಿತವಾಗಿಯೂ ಅದರಿಂದ ಶ್ರೀಮಂತರಿಗೆ ಅನುಕೂಲವೇ ಹೊರತು ಬಡವರಿಗೆ ಅನುಕೂಲವಿಲ್ಲ ಎಂದು ಹೇಳ್ತಾ ಇದ್ದೇನೆ.

ಶ್ರೀ ಎ. ಭೀಮಪ್ಪನಾಯಕ್.—ಬಡವರಿಗೆ ಅನುಕೂಲವಲ್ಲ ಎಂದು ಅವರು ಹೇಳಿದರು. ಫ್ರೂಟ್‌ಕ್ಯಾಕ್ ಮಾಡಿ ಪರದೇಶಗಳಿಗೆ ಕಳುಹಿಸಿ ದುಡ್ಡು ಬರುವಹಾಗೆ ಮಾಡಿಕೊಂಡರೆ ಬಡವರಿಗೆ ಅದೇ ದುಡ್ಡಿನಿಂದ ಇತರ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುವುದಿಲ್ಲವೇ?

ಅಧ್ಯಕ್ಷರು.—ಫ್ರೂಟ್ ಕ್ಯಾಕ್ ಮಾಡಿ ಹೊರಕ್ಕೆ ಕಳುಹಿಸಿದರೆ ಇಲ್ಲಿ ಹಣ್ಣಿನ ಬೆಲೆ ಜಾಸ್ತಿ ಆಗುತ್ತದೆ, ಬಡವರು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ, ಸಾಹುಕಾರರಿಗೆ ಮಾತ್ರ ಸಾಧ್ಯ ಎಂದು ಹೇಳುತ್ತಾ ಇದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನಮ್ಮ ದೇಶದಲ್ಲಿ ಜನರಿಗೆ ಸಾಕಾಗುವಷ್ಟು ಹಣ್ಣು ತಿನ್ನಲಕ್ಕೆ ಇಲ್ಲದೇ ಇರುವಾಗ, ಪ್ರತಿಯೊಬ್ಬ ಸಾಮಾನ್ಯ ಮನುಷ್ಯನಿಗೂ ಸಿಕ್ಕದೇ ಇರುವಾಗ, ಇರುವ ಹಣ್ಣನ್ನು ಕ್ಯಾಕ್ ಮಾಡಿ ಪರದೇಶಗಳಿಗೆ ಕಳುಹಿಸಿ ಮೂರಾಟಮಾಡಿ ಅಲ್ಲಿಂದ ಲಪ್‌ಸ್ಟಿಕ್, ಮೋಟಾರ್‌ಸೈಕಲ್ ಮುಂತಾದ ಭೋಗವಸ್ತುಗಳನ್ನು ಆಮದು ಮಾಡಿಕೊಂಡರೆ ಬಡವನಿಗೆ ಅನುಕೂಲವಾಗುತ್ತದೆ ಎಂದು ಶ್ರೀವಾರ್ ಭೀಮಪ್ಪನಾಯಕರು ಹೇಳುತ್ತಾರೆಯೇ?

ಶ್ರೀ ಎ. ಭೀಮಪ್ಪನಾಯಕ್.—ಈಗ ಇರುವುದನ್ನೇ ತಿನ್ನದೆ ಹಾಗೆಯೇ ಬಿಡುತ್ತಾ ಇದ್ದೀರಿ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಯಾವ ಹಣ್ಣು ಇವೊತ್ತಿನ ದಿವಸ ದೇಶದಲ್ಲಿ ಕೊಳೆತುಹೋಗುತ್ತಾ ಇದೆ ಎಂಬುದನ್ನು ದಯವಿಟ್ಟು ಹೇಳಿ. ಯಾವ ಒಂದು ತೋಟಕ್ಕೆ ಹೋದರೂ ಯಥೇಚ್ಛವಾಗಿ ಹಣ್ಣು ಸಿಕ್ಕುತ್ತಾ ಇದೆ ಎಂಬುದನ್ನು ತೋರಿಸಿದರೆ ಆಯಿತು ಒಪ್ಪಿಕೊಳ್ಳುತ್ತೇನೆ.

ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿಗೆ 20 ಲಕ್ಷ ರೂಪಾಯಿಗಳನ್ನು ಒದಗಿಸಿ ಡೆವಲಪ್‌ಮೆಂಟ್‌ಸ್ಕೀಂಸ್ ಹಾಕಿದ್ದೀರಿ. ಮೈಸೂರು, ಬೆಂಗಳೂರುಗಳಲ್ಲಿ ಯಾವ ರೀತಿ ಉದ್ಯಾನವನಗಳ ವ್ಯವಸ್ಥೆ ಮಾಡಿದ್ದೀರೋ ಅದೇ ರೀತಿ ಪ್ರತಿ ಜಿಲ್ಲೆಗೂ, ಪ್ರತಿ ತಾಲ್ಲೂಕಿಗೂ ಒಂದೊಂದು ಸರ್ಕಾರಿ ಉದ್ಯಾನವನದ ವ್ಯವಸ್ಥೆಮಾಡಿ ಅಲ್ಲಿನ ಜನರ ಮನೋರಂಜನೆಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಕಾಟೇಜ್ ಇಂಡಸ್ಟ್ರೀಸ್‌ನಲ್ಲಿ ಖಾದಿಯನ್ನು ಚೆಕ್ಸ್ ಟೈಲ್ ಡಿಪಾರ್ಟ್‌ಮೆಂಟಿನಲ್ಲಿ ಸೇರಿಸಿಕೊಂಡಿದ್ದೀರಿ. ಕೇಂದ್ರದಲ್ಲಿ ಖಾದಿಗೆ ಪ್ರತ್ಯೇಕವಾದ ಒಂದು ಬೋರ್ಡನ್ನೇ ರಚನೆ ಮಾಡಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಈ ಖಾದಿ ಉದ್ಯಮವನ್ನು ಚೆಕ್ಸ್‌ಟೈಲ್ ಡಿಪಾರ್ಟ್‌ಮೆಂಟಿಗೆ ಸೇರಿಸಿರುವುದು ಕಟುಕನ ಕೈಯಲ್ಲಿ ಗೋನದನವನ್ನು ಕೊಟ್ಟಹಾಗೆ ಆಗಿದೆ. ಖಾದೀ ಮತ್ತು ಕಾಟೇಜ್ ಇಂಡಸ್ಟ್ರೀಸ್‌ಗೆ ಪ್ರತ್ಯೇಕವಾದ ಒಂದು ಬೋರ್ಡನ್ನು ರಚನೆ ಮಾಡಿ ಖಾನಗಿ ಅಧ್ಯಕ್ಷರನ್ನು ನೇಮಿಸಿ ಖಾದಿಯ ವಿಷಯದಲ್ಲಿ ಒಲವು ಇರುವವರ ಕೈಗೆ ಇದನ್ನು ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಚೆಕ್ಸ್‌ಟೈಲ್ ಡಿಪಾರ್ಟ್‌ಮೆಂಟಿನವರ ಕೈಗೆ ಇದನ್ನು ಕೊಟ್ಟರೆ ಖಾದಿ ಖಂಡಿತವಾಗಿಯೂ ಉದ್ಧಾರವಾಗುವುದಿಲ್ಲ. ಏಕೆಂದರೆ ಇದರಿಂದ ಅವರಿಗೆ ಫಾಯದೆ ಇಲ್ಲ ಇದರಲ್ಲಿ ಅವರಿಗೆ ಮನಸ್ಸೂ ಇಲ್ಲ. ಆದ್ದರಿಂದ ಇದನ್ನು ಚೆಕ್ಸ್‌ಟೈಲ್ ಡಿಪಾರ್ಟ್‌ಮೆಂಟಿನಿಂದ ತಪ್ಪಿಸಿ ಬೊಂಬಾಯಿ ಮತ್ತು ಸೌರಾಷ್ಟ್ರ ದೇಶಗಳಲ್ಲಿ ಯಾವ ರೀತಿ ಖಾದಿ ಮತ್ತು ಕಾಟೇಜ್

ಇಂಡಸ್ಟ್ರೀಸ್ ಬೋರ್ಡ್ ಎಂಬುದಾಗಿ ಪ್ರತ್ಯೇಕವಾಗಿ ನಡೆಸುತ್ತಾ ಇದ್ದಾರೋ ಅದೇ ರೀತಿ ಇಲ್ಲೂಕೂಡ ನಡೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ನಾನು ಸುಮಾರು ನಾಲ್ಕು ವರ್ಷಗಳಿಂದಲೂ ಖಾದಿ ಅಂಡ್ ಕಾಟೇಜ್ ಇಂಡಸ್ಟ್ರೀಸ್ ಬೋರ್ಡಿನಲ್ಲಿದ್ದು, ಅದರ ಅನುಭವದಿಂದ ಆ ಬೋರ್ಡಿಗೆ (Statutory Powers) ಸ್ಟಾಚ್ಯುಟರಿ ಪವರ್ಸ್ ಕೊಡಬೇಕೆಂದು ಹೇಳುತ್ತಾ ಇದ್ದೇನೆಯೇ ಹೊರತು ಸುಮ್ಮನೆ ಹೇಳುತ್ತಾ ಇಲ್ಲ.

ಸಾಯರ್ ಕಛೇರಿವೇಷ್ಟಿಗೆ ತಕ್ಕ ವ್ಯವಸ್ಥೆ ಮಾಡಬೇಕಾದದ್ದು ಅಗತ್ಯ. ಹೆಚ್ಚು ಮಳೆ ಇಲ್ಲದ ಮೈದಾನ ಪ್ರದೇಶದಲ್ಲಿ ಇದು ಅಷ್ಟು ಅಗತ್ಯವಿಲ್ಲದಿದ್ದರೂ ಮಲೆನಾಡು ಪ್ರದೇಶದಲ್ಲಿ ಬಹಳ ಅವಶ್ಯಕವಾಗಿದೆ. ಜಪ್ತೀನಿಗೆ ಗೊಬ್ಬರ ಹಾಕುತ್ತಾರೆ; ನೀರು ಬಂದು ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ಮಲೆನಾಡಿನಲ್ಲಿ ಸಾಯಲ್ ಕಛೇರಿವೇಷ್ಟಿ ಕೆಲಸ ನಡೆಸಲು ತಕ್ಕ ಕ್ರಮ ಕೈಗೊಳ್ಳಬೇಕು.

Soap-making with non-edible oil ಎಂದು ಹೇಳಿ ಒಂದು ಯೋಜನೆಯನ್ನು ಹಾಕಿದ್ದೀರಿ. ಇದಕ್ಕೆ ಒಂದೆರಡು ಲಕ್ಷ ರೂಪಾಯಿ ಖರ್ಚು ಮಾಡಿದರೆ ಕೆಲವು ಜನರಿಗೆ ಉದ್ಯೋಗ ಕೊಡಲಕ್ಕೆ ಸಾಧ್ಯವಾಗಬಹುದು. ಈರೀತಿ ಉದ್ಯೋಗವಿಲ್ಲದೆ ಎಲ್ಲ ಸೋಮಾರಿಗಳಾಗಿ ಜನ ಇದ್ದಾರೋ ಅಂಥ ಕಡೆ ಈ ತರಹ ಇಂಡಸ್ಟ್ರೀಸನ್ನು ಸ್ಥಾಪನೆ ಮಾಡಲಕ್ಕೆ ಹೆಚ್ಚು ಹಣ ಒದಗಿಸಿದಪಕ್ಷದಲ್ಲಿ ಜನಗಳಿಗೆ ಉದ್ಯೋಗ ಸಿಕ್ಕಲು ಅನುಕೂಲವಾಗುತ್ತದೆಯೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಬಹು ಜನಗಳಿಗೆ ಉದ್ಯೋಗ ದೊರೆಯಬೇಕಾದರೆ ಗ್ರಾಮ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ಹೇಳುತ್ತೇನೆ.

Industrial Estates ಗೆ 50 ಲಕ್ಷ ರೂಪಾಯಿ ಒದಗಿಸಿದ್ದೀರಿ. ಬೆಂಗಳೂರು ನಗರದಲ್ಲಿ ಕೈಗಾರಿಕೆ ಸ್ಥಾಪನೆ ಮಾಡಿದರೆ ಬೆಂಗಳೂರಿನಲ್ಲಿರುವವರಿಗೆ ಅದರ ಅನುಕೂಲ ಸಿಕ್ಕುತ್ತದೆ. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರು ಗಳಲ್ಲಿ, ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿರತಕ್ಕ ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಿಕೊಟ್ಟಂತೆ ಆಗುವುದಿಲ್ಲ. ಇದು ಸರಿಯಾದ ಮಾರ್ಗವಲ್ಲ. ಮೈಸೂರು ಸಂಸ್ಥಾನದ 10 ಜಿಲ್ಲೆಗಳಿಗೂ ಈ 50 ಲಕ್ಷ ರೂಪಾಯಿಗಳನ್ನು ಹಂಚಿದರೆ ಒಂದೊಂದು ಜಿಲ್ಲೆಗೆ ಐದು ಲಕ್ಷ ರೂಪಾಯಿ ಬರುತ್ತದೆ. ಈ ರೀತಿ ಹಂಚಿಕೆ ಮಾಡಿ ಆಯಾ ತಾಲ್ಲೂಕು ಮತ್ತು ಜಿಲ್ಲಾ ಹೆಡ್ ಕ್ವಾರ್ಟರುಗಳಲ್ಲಿರತಕ್ಕ ಜನಗಳಿಗೆ ಕೈಗಾರಿಕೆಗಳನ್ನು ಸ್ಥಾಪನೆಮಾಡಲು ಅನುಕೂಲ ಒದಗುವಂತೆ ಮಾಡಿಕೊಡಬೇಕು. ಈ ರೀತಿ ಮಾಡಿದರೆ ಬೆಂಗಳೂರು ನಗರದಲ್ಲಿ ಈಗ overpopulation ಆಗಿರುವುದು ಸ್ವಲ್ಪ ಮಟ್ಟಿಗೆ ಕಡಿಮೆಯಾಗುವುದಕ್ಕೂ ಕೂಡ ಸಹಕಾರಿಯಾಗುತ್ತದೆ.

ಮುಖ್ಯವಾಗಿ ಈಗ ನಮಗೆ ತಿಳಿದು ಬರುವಂತೆ ಸರ್ಕಾರಿ ಅಧಿಕಾರಿಗಳ ಸಂಬಳಸಾರಿಗೆಗಳಿಗೆ ಹೆಚ್ಚು ಹಣ ಉಪಯೋಗಿಸಿಕೊಂಡು ಖರ್ಚು ಮಾಡುತ್ತಾ ಇರುವುದು ಕಂಡುಬರುತ್ತಿದೆಯೇ ವಿನಾ ವಾಸ್ತವವಾಗಿ ಹೆಚ್ಚು ಬಂಡವಾಳವನ್ನು ಕೈಗಾರಿಕೆಗಳಲ್ಲಿ ಹಾಕಿ ಪ್ರತಿಯೊಬ್ಬ ಮನುಷ್ಯನಿಗೂ ಉದ್ಯೋಗ ಕಲ್ಪಿಸಿಕೊಡುತ್ತಾ ಇರುವುದು ಕಂಡುಬರುತ್ತಾ ಇಲ್ಲ. ನಮ್ಮ ಮೈಸೂರು ಸಂಸ್ಥಾನದ ಯೋಜನೆ ಅಲ್ಲದೆ ಅಖಿಲ ಭಾರತದ ಯೋಜನೆಯನ್ನು ತೆಗೆದುಕೊಂಡರೂ ಕೂಡ ದೊಡ್ಡ ಕೈಗಾರಿಕೆ, ಮಧ್ಯಮ ಕೈಗಾರಿಕೆ, ಮತ್ತು ಸಣ್ಣ ಕೈಗಾರಿಕೆ ಇವುಗಳಿಗೆ ಎಲ್ಲಕ್ಕೂ ರಕ್ಷಣೆ ಸಿಕ್ಕಬೇಕು. ದೊಡ್ಡ ಕೈಗಾರಿಕೆಗಳ ಉತ್ಪನ್ನದ ಪ್ರಮಾಣವನ್ನು ಹತೋಟಿಯಲ್ಲಿಟ್ಟುಕೊಂಡು ಸಣ್ಣ ಕೈಗಾರಿಕೆಗಳಿಗೆ ರಕ್ಷಣೆ ಕೊಡಬೇಕು ಎನ್ನುವುದು ಒಂದು ನೀತಿಯಾದರೆ ಮೈಸೂರು ಸಂಸ್ಥಾನದಲ್ಲಿ ಈ ಕೈಗಾರಿಕೆಗಳು ಮುಂದೆ ಬರುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿ ಈ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಜನಗಳಿಗೆ ಅನುಕೂಲ ಒದಗುವ ಹಾಗೆ ಅಲ್ಪ ಸ್ವಲ್ಪ ಮಾರ್ಪಾಡು ಮಾಡಬೇಕೆಂದು ಸರ್ಕಾರದವರಿಗೆ ಸಲಹೆ ಮಾಡುತ್ತೇನೆ.

Mr. SPEAKER.—Now, the House will rise and meet at 10-45.

The House then adjourned for Lunch at Fifteen Minutes past Ten of the Clock and re-assembled at Forty-Five Minutes past Ten of the Clock.

[MR. SPEAKER in the Chair]

SPECIAL RESOLUTION.

Re : Schemes under the Second Five-Year Plan.

*Sri H. SIDDAVEERAPPA (Minister for Home).—Sir, with your permission and the permission of the Hon'ble House, I wish to move this special Resolution in connection with the Second Five-Year Plan.

"This House while approving the Draft Second Five-Year Plan for Mysore is of the view that the present allotment of Rs. 80.49 crores is inadequate to meet the several developmental schemes and resolves to request the Government of India to allot more funds as each of these schemes progresses. The House wishes to take this opportunity to urge upon the Government of India to locate in the State some of the Heavy Industries undertaken by the Central Government in the Public Sector in view of the several natural and other facilities that the State at present commands.

The House further resolves to request the Government of India to assist the Mysore Iron and Steel Works, Bhadravathi, to manufacture Special Steels includ-